ವಿಶಾಲವಾದ ರಸ್ತೆಗೆ. ಹಲವು ವಿಧದ ಮನುಷ್ಯರು, ಅವರ ವಾಹನಗಳು ಸಂಚರಿಸುವ ರಸ್ತೆ!

ಭೂಮಿಯ ಮೇಲೆ ಇಷ್ಟು ಹೆಚ್ಚಿನ ಜನರಿದ್ದು ಅವರಲ್ಲಿ ಯಾರಾದರೂ ಒಬ್ಬರು ಒಳ್ಳೆಯ ಸ್ಥಿತಿಯಲ್ಲಿ ತನ್ನನ್ನು ಸಾಕಬಾರದೆ! ಹೀಗೆ ಯೋಚಿಸುತ್ತ ಅವಳು ಗುರಿಯಿಲ್ಲದೆ ನಡೆದಳು. ಮುಂದಕ್ಕೆ...

ಒಂದೆರಡು ಕಡೆಗಳಲ್ಲಿ ಅವಳು ನಿಂತಳು. ರಸ್ತೆ ಬದಿಯ ಹಸಿರು ಹುಲ್ಲುಗಳನ್ನು ಕಚ್ಚಿ ನೋಡಿದಳು. ತಿನ್ನುವಂಥದ್ದು ಏನೂ ಇಲ್ಲ.

ರಸ್ತೆಯಲ್ಲಿ ಎರಡು ಫರ್ಲಾಂಗ್ ನಡೆದಿರಬಹುದು. ಆಗ ಅವಳು ಸ್ವಾರಸ್ಯಕರ ದೃಶ್ಯವೊಂದನ್ನು ಕಂಡಳು. ಮನೆ ಬಿಟ್ಟು ಹೊರಟ ಬಳಿಕ ಅವಳು ಸ್ವವರ್ಗದವರನ್ನು ಕಾಣುತ್ತಿದ್ದಳು ಈಗ... ಮೂವರು ಮನುಷ್ಯರು ಆರು ನಾಯಿಗಳು ಇರುವ ಒಂದು ಗುಂಪು. ಅವಳಿಗಿದಿರಾಗಿ ಬರುತ್ತಿದೆ. ಮನುಷ್ಯರು ನಾಯಿಗಳಿಗೆ ಸಂಕೋಲೆ ಹಾಕಿ ಹಿಡಿದುಕೊಂಡಿದ್ದಾರೆ. ಹಲವು ಬಣ್ಣಗಳಲ್ಲಿರುವ ನಾಯಿಗಳು. ಎಲ್ಲ ಬಡಕಲಾದ ಎಲುಬುಗಳು ದೇಹದಲ್ಲಿ ಎದ್ದು ಕಾಣಿಸುತ್ತಿವೆ.

ರೋಸಿಯನ್ನು ಕಂಡಾಗ ಒಬ್ಬಾತ ಹೇಳಿದ.

"ಇದೇ ಬರುತ್ತಿಯೇನೂ, ಒಂದು ಅಲೆಮಾರಿಯೂ ಸಹ."

"ಬಿಡಬೇಡ. ಓಡಬಹುದು ನೋಡು..."

"ಬೆಳವಣಿಗೆ ಪೂರ್ಣ ಆಗಲಿಲ್ಲ..."

"ಮಾತನಾಡಬೇಡ... ಸಿಕ್ಕಿದ್ದನ್ನು ಬಿಡಬೇಕೆ..."

ರೋಸಿ ಆ ಮನುಷ್ಯರನ್ನು ಒಮ್ಮೆ ಚೆನ್ನಾಗಿ ನೋಡಿದಳು. ಮೂವರು ಮಾಸಿದ ಖಾಕಿ ಬಟ್ಟೆ ತೊಟ್ಟಿದ್ದಾರೆ. ಇಬ್ಬರದು ಹರಿದ ಬನಿಯನು.

ಅದರಲ್ಲೊಬ್ಬ ತನ್ನ ಕೈಯಲ್ಲಿದ್ದ ಚೀಲದಿಂದ ಬ್ರೆಡ್ಡಿನ ತುಂಡುಗಳನ್ನು ಅವಳತ್ತ ಎಸೆದ.

ಇಪ್ಪತ್ನಾಲ್ಕು ಗಂಟೆಗಳ ಬಳಿಕ ಅವಳು ತಿನ್ನಬಹುದಾದ ವಸ್ತುವನ್ನು ಮೊದಲ ಬಾರಿಗೆ ನೋಡಿದಳು!...

ಅವಳದನ್ನು ಆಸೆಯಿಂದ ಒಳಸೇರಿಸಿದಳು.

ಆ ಮನುಷ್ಯರು ಒಳ್ಳೆಯವರೆಂಬುದು ರೋಸಿಗೆ ಮನದಟ್ಟಾಯಿತು.

ಎರಡನೆಯದೊಂದು ತುಂಡನ್ನೂ ಅವರು ಕೊಟ್ಟರು. ಅವರ ಮುಂದೆ ತುಂಬಾ ಹತ್ತಿರದಿಂದ ಅದನ್ನು ತಿನ್ನುತ್ತಿರುವಾಗ ರೋಸಿ ನೆನಪಿಸಿಕೊಂಡಳು. ಆಗ ಈ ಜಗತ್ತಿನಲ್ಲಿ ಒಳ್ಳೆಯವರಾದ ಮನುಷ್ಯರೂ ಇದ್ದಾರೆ!

ಬ್ರೆಡ್ಡಿನ ತುಂಡು ಎಸೆಯುವ ಮನುಷ್ಯರು ಅವಳ ಬೆನ್ನನ್ನು ಮೆಲ್ಲಗೆ ಸವರಿದರು. ಬಳಿಕ ದೃಢವಾಗಿ ಹಿಡಿದರು. ಅವಳು ವಿರೋಧಿಸಲಿಲ್ಲ... ಒಂದು ತಣ್ಣಗಿನ ಕಬ್ಬಿಣದ ಸಂಕೋಲೆ ಕೊರಳಿಗೆ ಬಿತ್ತು...

ರೋಸಿ ಸಂಕೋಲೆಯಲ್ಲಿ ಬಂದಿಯಾದಳು. ಗುಂಪಿನ ನಾಯಿಗಳ ಸಂಖ್ಯೆ ಏಳಾಯಿತು.

ಬದುಕಿನಲ್ಲಿ ಅದೇ ಮೊದಲ ಬಾರಿಗೆ ಅವಳನ್ನು ಮನುಷ್ಯನೊಬ್ಬ ಸಂಕೋಲೆ ಹಾಕಿ ಕೊಂಡೊಯ್ಯುತ್ತಿರುವುದು. ರೋಸಿಗೆ ಅರ್ಥವಾಯಿತು... ಜಗತ್ತಿನಲ್ಲಿ ಒಳ್ಳೆಯವರಾದ ಮನುಷ್ಯರೂ ಇದ್ದಾರೆ. ಒಂದು ಸಾಕು ಪ್ರಾಣಿಯಾಗಿ ಅವಳನ್ನು ಅಂಗೀಕರಿಸಲು ಭಯಪಡುವವರೂ ಇದ್ದಾರೆ... ಅಂತಹವರೊಬ್ಬರ ಸಮೀಪಕ್ಕೆ ಆಕೆ ಹೋಗುವುದರಲ್ಲಿದ್ದಾಳೆ... ಅವಳಿಗೂ... ಒಬ್ಬ ಯಜಮಾನನು ಇರುವುದನ್ನು ಕಾಣಲಿದ್ದಾಳೆ... ಪ್ರೀತಿಸುವುದು, ಮಾಂಸ ಅನ್ನ ಕೊಡುವುದು ಇತ್ಯಾದಿಗಳು ಜಿಮ್ಮಿಗೆ ಮಾತ್ರವೇ ಅಲ್ಲ ಇರುವುದು!...

"ಇಂದು ನರಿಯನ್ನು ಕಣಿ ಕಂಡುದು, ಸಂಖ್ಯೆ ಏಳಾಯಿತು. ಸ್ವಲ್ಪ ಹಣ ಸಿಗಬಹುದು."

"ಏಳು ಎರಡು ಹದಿನಾಲ್ಕು ಹಾಗಲ್ಲವೇ ಲೆಕ್ಕ?"